† ಶ್ರೀ ಎಸ್. ಬಂಗಾರಪ್ಪ.—ಈ ರೀತಿ ನಮ್ಮ ಸ್ನೇಹಿತರಂ ದಕ್ಷಿಣ ಕನ್ನಡ ಜಿಲ್ಲೆಯನ್ನೇ ಸೇವಿಂತ ವಾಗಿಟ್ಟುಕೊಂಡು ಥರ್ಮಲ್ ಪವರ್ ಪ್ಲಾಂಟ್ ಅಲ್ಲಿ ಸ್ಥಾಪಿಸಬೇಕೆಂದು ಕೇಳುತ್ತಿದ್ದಾರೆ. ರಾಜ್ಯದಲ್ಲಿ ಯಾವ ಸ್ಥಳ ಥರ್ಮಲ್ ಪ್ಲಾಂಟ್ ಹಾಕುವುದಕ್ಕೆ ಯೋಗ್ಯ ಎನ್ನುವುದು ತಜ್ಞರ ತಾಂತ್ರಿಕ ವರದಿಯ ಮೇಲೆ ಅವಲಂಬಿಸುತ್ತದೆ. ಈಗ ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆಯಲ್ಲಿ ಮಂಗಳೂರಿನ ವಿಷಯ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ರಾಜ್ಯದಲ್ಲಿ ಎಲ್ಲ ಥರ್ಮಲ್ ಪ್ಲಾಂಟ್ ಮಾಡಿದರೆ ರಾಜ್ಯದ ಪ್ರಗತಿಪರ ದೃಷ್ಟಿ ಯಿಂದ ಒಳ್ಳೆಯದಿರುತ್ತದೋ ಅಲ್ಲಿ ಮಾಡಬೇಕಾಗುತ್ತದೆ. ಈಗ ಮಂಗಳೂರಿನಲ್ಲಿ ಆಗಲಿ, ಮತ್ತೊಂದು ಕಡೆಯಾಗಲಿ ಎಂಬ ವಾದ-ವಿವಾದ ವಿಚಾರ ಇರತಕ್ಕುದ್ದು ರಾಯಚೂರಿನಲ್ಲಿ ಮಾಡುವ ಬಗ್ಗೆ ಅದು ಇನ್ನೂ ಕಂಪ್ಲೀಟ್ ಆಗಿಲ್ಲ ಅದು ಇನ್ನೂ ಫಸ್ಟ್ ಸ್ಟೇಜಿನಲ್ಲಿ ಇದೆ. ಸೆಕಂಡ್ ಸ್ಟೇಜಿನಲ್ಲಿ ೧೯೮೪ರ ಹೊತ್ತಿಗೆ ಎರಡನೇ ಪವರ್ ಪ್ಲಾಂಟ್ ಸ್ಥಾಪಿಸುವ ಬಗ್ಗೆ ವಿಚಾರಮಾಡೋಣ.

ಶ್ರೀ ಆನಂದಕುಂದ ಹೆಗ್ಡೆ.—ಮಂಗಳೂರಿನಲ್ಲಿ ತಾಪಸ್ಥಾವರವನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರದಿಂದ ಸೂಚನೆ ಬಂದಿರುವುದು ನಿಜವೇ?

ಶ್ರೀ ಎಸ್. ಬಂಗಾರಪ್ಪ.—ಈಗ ಸದ್ಯಕ್ಕೆ ಆ ಬಗ್ಗೆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಂಗಳೂರು ಬಗ್ಗೆ ಮಾತ್ರ ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಾರೆ ಎಂದು ಹೇಳಿದರು. ಮತ್ತು ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕು ಎಂದು ಹೇಳಿದರು. ಬಹುಶಃ ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ರಾಯಚೂರು ಜೊತೆಗೆ ಮಂಗಳೂರಿನ ಹೆಸರನ್ನೂ ಥರ್ಮಲ್ ಪ್ಲಾಂಟ್ ಸ್ಥಾಪನೆ ಮಾಡುವುದಕ್ಕೆ ಸೇರಿಸಲಾಗಿತ್ತು. ಮಂಗಳೂರು ಕರ್ನಾಟಕದಲ್ಲಿ ಇರುವುದರಿಂದ ರಾಜ್ಯದ ಹಿತದೃಷ್ಟಿಯಿಂದ ಇದರಲ್ಲಿ ಮಂಗಳೂರಿನ ಹೆಸರು ಬುದಿತ್ತು. ಮತ್ತೆ ಮಂಗಳೂರಿನ ಹೆಸರನ್ನು ಥರ್ಮಲ್ ಪ್ಲಾಂಟ್ ಹಾಕುವುದಕ್ಕೆ ಏತಕ್ಕೆ ಸೂಚನೆ ಮಾಡಿದರು ಎಂದರೆ ಮಂಗಳೂರಿನಲ್ಲಿ ಒಂದು ಬೃಹತ್ ಬಂದರು ಇದೆ, ಬೇರೆ ಕಡೆಯಿಂದ ಕೋಲ್ ತರುವುದಕ್ಕೆ ಅನುಕೂಲವಾಗುತ್ತದೆ. ಇನ್ನೂ ಮುಂತಾದ ಸಾಮಾನು ಗಳನ್ನು ಹೊರಗಡೆಯಿಂದ ನೀರಿನ ಮೂಲಕ ಸುಲಭವಾಗಿ ತರುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಮಂಗಳೂರಿಗೆ ಥರ್ಮಲ್ ಪ್ಲಾಂಟ್ ಬರಬೇಕು ಎನ್ನುವ ಪ್ರಪೋಸಲ್ ಇತ್ತು. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ಥರ್ಮಲ್ ಪ್ಲಾಂಟನ್ನು ಮಂಗಳೂರಿನಲ್ಲಿ ಹಾಕುವುದು ಸಮಂಜಸ ಎಂದು ಮಾತ್ರ ಹೇಳುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.-ನಾನು ಸುಮ್ಮನೆ ಹೇಳಿದೆ ಥರ್ಮಲ್ ಪವರ್ ಪ್ಲಾಂಟ್ ಅನ್ನು ರಾಯಚೂರಿ ನಲ್ಲಿ ಮಾಡಿದರೆ ಅದು ಅಲ್ಲಿಗೆ ಹೋಗುತ್ತದೆ. ಮಂಗಳೂರಿನಲ್ಲಿ ಮಾಡಿದರೆ ಮತ್ತೊಂದು ಉಪಯೋಗಕ್ಕೆ ಬರುತ್ತದೆ. ಮಂಗಳೂರು ಕೂಡ ನುಧ್ಯದಲ್ಲಿ ಇದೆ. ಅಲ್ಲಿ ರೇವು ಆಶ್ರಯ ಇದೆ. ಅಲ್ಲಿ ಥರ್ಮಲ್ ಪ್ಲಾಂಟ್ ಮಾಡಿದರೆ ಕೋಲ್ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ರೇವು ಇರುವುದರಿಂದ ಅನುಕೂಲವಾಗುತ್ತದೆ. ರಾಯಚೂರನ್ನು ಥರ್ಮಲ್ ಪ್ಲಾಂಟ್ ಸ್ಥಾಪನೆಗೆ ಆಯ್ಕೆ ಮಾಡುವ ಕಾಲದಲ್ಲಿ ಮಂಗಳೂರು ಸಹ ಇತ್ತು. ಮುಂದೆ ಎರಡನೇ ಥರ್ಮಲ್ ಪ್ಲಾಂಟ್ ಸ್ಥಾಪನೆ ಮಾಡುವಾಗ ಮಂಗಳೂರನ್ನು ವಿಚಾರ ಮಾಡೋಣ ಎಂದು ನಾನು ಈಗಾಗಲೇ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಹೇಳಿದ್ದೇನೆ

Sites in Villages of Sindagi Taluk

678 SRI M. H. BEKINALKAR (Sindgi).—Will the Minister for Housing and Urban Development be pleased to state.—

(a) the number of villages of Sindgi Taluk where sites have not been given, which are such villages;

(b) the reasons for not distributing house sites in these villages?

SRI DHARM SINGH (Minister for Housing and Urban Development).—

(a) Six-Villages. *viz* ;

1	Saladhalli	2	Wandal
3	Ramanalli	4	Nagarhalli
5	Kaldewad	6	Hachyal

(b) No sites were distributed in these villages as it is only in the recent resurvey it is identified that there are 57 siteless persons in these villages.

SRI M. H. BEKINALKAR.—In the answer only the names of six villages have been given. Apart from these six villages, there are some other villages where sites have not been given. Will the Government be pleased to instruct the Deputy Commissioner to include the other four villages also.

† ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ ಈಗಾಗಲೇ ನಾವು ಸಿಂದಗಿ ತಾಲ್ಲೂಕಿನಲ್ಲಿ ಲಘ್ಟ್ ಸೈಟುಗಳನ್ನು ಹಂಚಿದ್ದೇವೆ. ಮತ್ತು ಈಗ ನಮಗೆ ಒಂದಿರುವ ವರ್ತಮಾನದ ಪ್ರಕಾರ ಈ ಹಳ್ಳಿಗಳಲ್ಲಿ ೫೭ ಜನ ನಿವೇಶನ ಇಲ್ಲದವರು ಇದ್ದಾರೆ ಎಂದು ಗೊತ್ತಾಗಿದೆ. ಅವರಿಗೆ ನಿವೇಶನಗಳನ್ನು ಕೊಡಬೇಕೆಂದು ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಡಲಾಗಿದೆ.

SRI M. H. BEKINALKAR.—The survey of these siteless persons has not been done properly by the Village Accountants because they are under the impression that the sites are to be given only to the SCs and STs and not to other communities who are not having sites So, I request the Government to give clear instructions to the Deputy Commissioner and the Village Accountants to include the names of the siteless persons irrespective of their communities and accordingly, sites be given.

ಶ್ರೀ ಧರ್ಮಸಿಂಗ್.—ಈಗಾಗಲೇ ಹರಿಜನ ಗಿರಿಜನರು ನಿವೇಶನ ಇಲ್ಲದವರು ಯಾರು ಯಾರು ಇದ್ದಾರೆ. ಅವರ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಜೊತೆಗೆ ಬೇರೆಯವರು ಮನೆ ನಿವೇಶನ ಇಲ್ಲದವರು ಯಾರ್ಯಾರು ಇದ್ದಾರೆ ಅವರ ಹೆಸರುಗಳ ಪಟ್ಟಿಯನ್ನು ತಯಾರು ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಅಧಿಕಾರಿಗಳು ಮಾಡುತ್ತಾರೆ.

Shifting of Villages near Hemavathi Project

703 SRI H. D. DEVEGOWDA (Holenarasipur).—Will the Chief Minister be pleased to state ;

(a) whether representations have been received by them to shift Hanumanthalli, Hangarahalli, Haralahalli, Kamasamudra and Mavinakere villages in Holenarasipura Taluk as the Hemavathi project canal will pass through the upper parts of these villages which is dangerous to the Health of the people therein :